O.S.No.:70/2020
P.W.:2

ಈ ದಿನ ದಿಃ15.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಟಿ.ಕೆ.ಆರ್ ರವರಿಂದಃ-**

1. ನಾನು ವ್ಯವಸಾಯ ಮಾಡುತ್ತೇನೆ. 3ನೇ ಪ್ರತಿವಾದಿಯನ್ನು ನಾನು ನೋಡಿದ್ದೇನೆ. 3ನೇ ಪ್ರತಿವಾದಿ ನನಗೆ ಪರಿಚಯಸ್ಥರು ಎಂದರೆ ಸರಿಯಲ್ಲ. ವಾದಿ ನನ್ನ ಸಹೋದರಮಾವ ಎಂದರೆ ಸರಿ. ನಾನು, ನನ್ನ ಅಣ್ಣ ರಾಘು 3ನೇ ಪ್ರತಿವಾದಿಯ ಬಳಿ ಮೂರು ಲಕ್ಷ ರೂಪಾಯಿಗಳಿಗೆ ಸಂಬಂಧಿಸಿದಂತೆ ಚೀಟಿಯ ವ್ಯವಹಾರ ಮಾಡಿದ್ದೇವು ಎಂದರೆ ಸರಿಯಲ್ಲ. ಚೀಟಿಯ ವ್ಯವಹಾರದಲ್ಲಿ 3ನೇ ಪ್ರತಿವಾದಿಯು ನಷ್ಟವನ್ನು ಹೊಂದಿದ್ದರು ಆ ಸಮಯದಲ್ಲಿ ಅವರು ಹಣ ನಮಗೆ ಕೊಡಲು ಸಾಧ್ಯವಿಲ್ಲದೆ ಇದ್ದಾಗ ವಾದಿಯ ಹೆಸರಿಗೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಒಂದು ನಂಬಿಕೆಯ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯು ಆ ಸಮಯದಲ್ಲಿ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಭದ್ರತೆಯ ಸಲುವಾಗಿ ಕ್ರಯಪತ್ರ ಬರೆದುಕೊಡಲು ಒಪ್ಪಿ ಕೊಂಡಿದ್ದರು ಆದರೆ ನಾವುಗಳು ಅವರಿಂದ ನಂಬಿಕೆಯ ಕ್ರಯಪತ್ರ ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

2. 3ನೇ ಪ್ರತಿವಾದಿಯು ವಾದಿಯಿಂದ ದಾವಾಸ್ವತ್ತಿಗೆ ಸಂಬಂಧಿಸಿದಂತೆ

ಯಾವುದೇ ಹಣವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಸ್ವಾಧೀನಾನುಭವವು ಈಗಲೂ ಸಹ 3ನೇ ಪ್ರತಿವಾದಿಯ ಕುಟುಂಬದಲ್ಲಿದೆ ಎಂದರೆ ಸರಿಯಲ್ಲ. ದಾವಾಸ್ವತ್ತು ಎಲ್ಲಿ ಬರುತ್ತದೆ ಎಂಬ ಬಗ್ಗೆಯು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ಲಪಟಾಯಿಸುವ ದುರುದ್ದೇಶದಿಂದ ನಾನು ವಾದಿಯ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ನಮಗೆ ಕೊಡಬೇಕಾದದ್ದು ಕೇವಲ 6ಲಕ್ಷ ರೂಪಾಯಿಗಳು ಮಾತ್ರ, ಆ ಹಣಕ್ಕೆ ಸುಮಾರು 70ಲಕ್ಷ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ಬರೆಸಿಕೊಂಡು ಅದರ ಆಧಾರದ ಮೇಲೆ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

O.S.No.:70/2020
P.W.:2
**ಜೆ.ಎಂ.ಎಫ್.ಸಿ, ಕನಕಪುರ.**